# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಕೆಂಪೇಗೌಡ ವಾರ್ಡ್ ನಂ-01ರಲ್ಲಿ ದಿನಾಂಕ: 18-09-2021 ರಂದು ನಡೆದ ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ರಜನಿಕಾಂತ್ ಮಲ್ಲಿ, ಅಧ್ಯಕ್ಷರು ಹಾಗೂ ನೊಡಲ್ ಅಧಿಕಾರಿಗಳು.
2. ಶ್ರೀ.ಮಲ್ಲಿನಾಥ ಮಲ್ಕಾಪುರ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿ.
3. ಶ್ರೀ. ಶಶಿಕುಮಾರ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ.ಚಂದ್ರಪ್ಪ ಅರಣ್ಯ ಇಲಾಖೆ
5. ಶ್ರೀ.ಬಾಬು ರೆಡ್ಡಿ ಸಹಾಯಕ ಅಭಿಯಂತರರು ವಿದ್ಯುತ್
6. ಶ್ರೀ.ವಿವೇಕ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01.
7. ಶ್ರೀ.ಶಿವಕುಮಾರ್ ಕಂದಾಯ ಪರಿವೀಕ್ಷಕರು ವಾರ್ಡ್ ನಂ-01

ವಾರ್ಡ್ ಸಮಿತಿಯ ಪ್ರಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಯಲಹಂಕ ಕೆಂಪೇಗೌಡ ವಾರ್ಡ್ ನಂ-01ರ ಪ್ರದೇಶಗಳಲ್ಲಿ ಹಾಗೂ ಪ್ರಕಾಶ ಥೇಯಟರ್‌ನ ಪಕ್ಕದಲ್ಲಿರುವ ಖಾಲಿ ಸೈಟ್‌ಗಳಲ್ಲಿ ಗಿಡಮರಗಳು ಬೆಳೆದಿದ್ದು, ಇದರಿಂದ ಅಕ್ಕಪಕ್ಕದಲ್ಲಿ ವಾಸಿಸುವ ಮನೆಗಳಿಗೆ ಹಾವು ಮುಂತಾದ ವಿಷ ಕ್ರಿಮಿಕಿಟಗಳು ಬರುತ್ತಿರುತ್ತವೆ ಎಂದು ಹಾಗೂ ಈ ಖಾಲಿ ಸೈಟ್‌ಗಳಲ್ಲಿ ಬೆಳೆದಿರುವ ಗಿಡಗಳನ್ನು ತೆಗೆಯುವಂತೆ ಸಭೆಯಲ್ಲಿ ಅ ಬ ಶಿವಕುಮಾರ್ ರವರು ಕೋರಿದರು. | ಖಾಲಿ ಜಾಗಗಳ ಪಟ್ಟಿ ತಯಾರಿಸಿ ಸದರಿ ವಿಳಾಸವನ್ನು ಕಂದಾಯ ಇಲಾಖೆಗೆ ಕಳುಹಿಸಲು ಹಾಗೂ ಕಂದಾಯ ಪರಿವೀಕ್ಷರಿಗೆ ಸದರಿ ಖಾಲಿ ಜಾಗದ ಮಾಲೀಕರಿಗೆ ದಂಡ ವಿಧಿಸಲು ಸಂಬಂದಿಸಿದ ವಾರ್ಡ್‌ನ ಅಭಿಯಂತರರಿಗೆ ಹಾಗೂ ಕಂದಾಯ ಪರಿವೀಕ್ಷಕರಿಗೆ ನೊಡೆಲ್ ಅಧಿಕಾರಿಗಳು ಸೂಚಿಸಿದರು. | ಸಹಾಯಕ ಅಭಿಯಂತರರು ವಾರ್ಡ್ -01. ಹಾಗೂ ಕಂದಾಯ ಪರಿವೀಕ್ಷಕರು ವಾರ್ಡ್ ನಂ-01. |
| 02 | ಯಲಹಂಕ ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಹೊಸಬೀದಿ ಯಲ್ಲಿ ಯು.ಜಿ.ಡಿ ಸರಿಪಡಿಸಿರುವುದಿಲ್ಲ. ಹಾಗೂ ಯು.ಜಿ.ಡಿ ಲೈನ್ ಬ್ಲಾಕ್ ಆಗಿದ್ದು, ಮ್ಯಾನ್ ಸರಿಪಡಿಸಿರುವುದಿಲ್ಲ ಎಂದು ತೆರೆದ ಮೊರೆಗೆ ಸ್ಯಾನಿಟರಿ ನೀರನ್ನು ಬಿಡುತ್ತಿರುತ್ತಾರೆಂದು ಶ್ರೀ.ಹೆಮರಾಜು ರವರು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು. | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸ್ಥಳದಲ್ಲಿ ಪರಿಶಿಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. ಹಾಗೂ ಎರಡು ವಾರದ ಒಳಗಾಗಿ ಸರಿಪಡಿಸುವುದಾಗಿ ಸಭೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಸಮಯಾವಕಾಶ ಕೋರಿದರು. | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂಎಸ್.ಎಸ್ .ಬಿ (ವಾರ್ಡ್ ನಂ-01) |

| | | | |
|---|---|---|---|
| 03 | ನಾಗರಾಜ್ ಮತ್ತು ಶಿವಣ್ಣ ಎಂಬುವವರು ಮಾರುತಿನಗರ 1ನೇ ಮುಖ್ಯರಸ್ತೆ 3ನೇ ಅಡ್ಡರಸ್ತೆಯಲ್ಲಿ 2 ಮತ್ತು 3ನೇ ವರ್ಷಗಳಿಂದ ಗುಜರಾತ್ ಬಾಯ್ಲರ್ ಹಾಕಿದ್ದು, ರಬ್ಬರ್ ಮತ್ತು ಕಾಗದ ಸುಡಿತ್ತಿದ್ದು, ಅಕ್ಕಪಕ್ಕದ ಮನೆಗಳಿಗೆ ಹೊಗೆ ಸುತ್ತಿಕೊಂಡಿರುವುದಾಗಿ ಕೂಡಲೇ ಸ್ಥಳ ಪರಿಶಿಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ರಾಜೇಂದ್ರ ಪ್ರಸಾದ್ ರವರು ಸಭೆಯಲ್ಲಿ ಕೋರಿದರು. | ಶ್ರೀ.ವಿವೇಕ್ ಕಿರಿಯ ಆರೋಗ್ಯ ಪರಿವೀಕ್ಷರಿಗೆ ಸ್ಥಳ ಪರಿವೀಕ್ಷಣೆ ಮಾಡಿ ಸದರಿಯವರಿಗೆ ನೋಟಿಸ್ ಜಾರಿ ಮಾಡಿ ಕ್ರಮ ಕೈಗೊಳ್ಳುವಂತೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್-1) |
| 04 | ಕೆಂಪೇಗೌಡ ವಾರ್ಡ್ 1ರಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರು ಇಲ್ಲದೇ ಇರುವ ಬಗ್ಗೆ ಹಾಗೂ ಆರೋಗ್ಯಾಧಿಕಾರಿಗಳು ಪ್ರತಿ ಸಭೆಗೆ ಹಾಜರಾಗದೇ ಇರುವ ಬಗ್ಗೆ ಅ.ಬ.ಶಿವಕುಮಾರ್ ರವರು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು. | ಆರೋಗ್ಯಾಧಿಕಾರಿಗಳಿಗೆ ಮೌಖಿಕವಾಗಿ ತಿಳಿಸುವುದಾಗಿ ಸಭೆಯಲ್ಲಿ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಆರೋಗ್ಯಾಧಿಕಾರಿಗಳು ಯಲಹಂಕ ವಲಯ |
| 05 | ಶ್ರೀಮತಿ. ಪದ್ಮಾ ಪಾಟಲ್ ಆರ್.ಡಬ್ಲ್ಯೂ.ಎ ರವರು ಸಭೆಯಲ್ಲಿ ಮಾತನಾಡಿ ವಾರ್ಡ್ ನಂ-1ರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ ಹಾಗೂ ಹಸಿ ಕಸ ಮತ್ತು ಒಣ ಕಸವನ್ನು ಸರಿಯಾದ ರೀತಿಯಲ್ಲಿ ಬೇರ್ಪಡಿಸುತ್ತಿಲ್ಲವೆಂದು ಹಾಗೂ ಒಣ ಕಸ ಬೇರ್ಪಡಿಸಿ 3 ಸಂಖ್ಯೆ ಆಟೋಗಳನ್ನು ನಿಯೋಜಿಸಿದ್ದು, ಒಂದು ವರ್ಷದಿಂದ ಒಂದು ಅಟೋ ಮಾತ್ರ ಕೆಲಸ ನಿರ್ವಹಿಸುತ್ತಿರುವುದಾಗಿ ಹಾಗೂ ಈ ಅಟೋ ಗುತ್ತಿಗೆದಾರರಿಗೆ ವೇತನ ಪಾವತಿಸಿರುವುದಿಲ್ಲ ವೆಂದು ಸಭೆಯಲ್ಲಿ ಮಾತನಾಡಿ ಅಕ್ಷೇಪಣೆ ವ್ಯಕ್ತಪಡಿಸಿದರು. | ಆರೋಗ್ಯಾಧಿಕಾರಿಗಳಿಗೆ ತಿಳಿಸುವುದಾಗಿ ಸಭೆಯಲ್ಲಿ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಆರೋಗ್ಯಾಧಿಕಾರಿಗಳು ಯಲಹಂಕ ವಲಯ |
| 06 | ವಾರ್ಡ್ ನಂ -01ರ ವ್ಯಾಪ್ತಿಯಲ್ಲಿ ಒಟ್ಟು 19 ಬ್ಲಾಕ್‌ಗಳಿದ್ದು, ಮೂರು ಸಂಖ್ಯೆ ಆಟೋಗಳು ಮಾತ್ರ ಕೆಲಸ ಮಾಡುತ್ತಿರುವುದಾಗಿ ಇದರಿಂದ ಬ್ಲಾಕ್ ಸ್ಪಾಟ್ ಕ್ಲೀಯರೆನ್ಸ್ ಮಾಡಲು ಕಷ್ಟಸಾಧ್ಯವಾಗಿರುತ್ತದೆ. ಎಂದು ಅಕ್ಷೇಪಿಸಿ 5 ಸಂಖ್ಯೆ ಆಟೋಗಳನ್ನು ವಾರ್ಡ್ ನಂ -01ರಲ್ಲಿ ಘನತ್ಯಾಜ್ಯ ನಿರ್ವಹಣೆ ಕೆಲಸ ನಿರ್ವಹಿಸಲು ನಿಯೋಜಿಸಿಕೊಡಬೇಕೆಂದು ಸಭೆಯಲ್ಲಿ ಶ್ರೀಮತಿ. ಪದ್ಮಾ ಪಾಟೀಲ್ ಆರ್.ಡಬ್ಲ್ಯೂ.ಎ ರವರು ಕೋರಿದರು. | ಆರೋಗ್ಯಾಧಿಕಾರಿಗಳಿಗೆ ತಿಳಿಸುವುದಾಗಿ ಸಭೆಯಲ್ಲಿ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಆರೋಗ್ಯಾಧಿಕಾರಿಗಳು ಯಲಹಂಕ ವಲಯ |
| 07 | ವಾರ್ಡ್ ನಂ -01ರ ವ್ಯಾಪ್ತಿಯಲ್ಲಿ ಪಿ.ಜಿ.ಗಳ ಸಂಖ್ಯೆ ಹೆಚ್ಚಾಗಿದ್ದು, ಪಿ.ಜಿ.ಕಟ್ಟಡಗಳಿಂದ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ಸರಿಯಾದ ರೀತಿಯಲ್ಲಿ ಮಾಡುತ್ತಿರುವುದಿಲ್ಲ ವೆಂದು ಆಕ್ಷೇಪಣೆ ಮಾಡಿ ಸದರಿ ಪಿ.ಜಿ.ಮಾಲೀಕರಿಗೆ ದಂಡ ವಿಧಿಸಬೇಕೆಂದು ಕೋರಿದರು. | ಆರೋಗ್ಯಾಧಿಕಾರಿಗಳಿಗೆ ತಿಳಿಸುವುದಾಗಿ ಸಭೆಯಲ್ಲಿ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಆರೋಗ್ಯಾಧಿಕಾರಿಗಳು ಯಲಹಂಕ ವಲಯ |
| 08 | ವಾರ್ಡ್ ನಂ -01 ಮತ್ತು 02ರ ವ್ಯಾಪ್ತಿಯಲ್ಲಿ ಲಿಂಕ್ ವರ್ಕ್ಸರ್ ರವರು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ ಸ್ಥಳೀಯ ಕೇಬಲ್ ನಾಗಣ್ಣ ರವರು ಸಭೆಗೆ ದೂರನ್ನು ನೀಡಿದರು. | ಆರೋಗ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕ್ರಮ ಕೈಗೊಳ್ಳಲು ತಿಳಿಸುವುದಾಗಿ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಆರೋಗ್ಯಾಧಿಕಾರಿಗಳು ಯಲಹಂಕ ವಲಯ ಹಾಗೂ ಸಹಾಯಕ ಕಾರ್ಯಪಾಲಕ ಅಬಿಯಂತರರು ಎಸ್.ಡಬ್ಲ್ಯೂ.ಎಂ |

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾದನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಡ)

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಢ)

**ಪ್ರತಿಯನ್ನು:**

ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.

1. ಶ್ರೀ.ರಜನಿಕಾಂತ್ ಮಲ್ಲಿ, ಅಧ್ಯಕ್ಷರು ಹಾಗೂ ನೊಡಲ್ ಅಧಿಕಾರಿಗಳು.

## ಅಧಿಕಾರಿಗಳ ಮಾಹಿತಿಗಾಗಿ.

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ವಿಭಾಗ ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಯಲಹಂಕರವರ ಸೂಕ್ತ ಕ್ರಮಕ್ಕಾಗಿ.